ಆ) ಅವುಗಳಲ್ಲಿ ಹೋಬಳಿವಾರು ಬಾಡಿಗೆ ಕಟ್ಟಡ ಅಥವಾ ಇಲಾಖೆಯ ಹೊರತಾದ ಕಟ್ಟಡಗಳು ಎಷ್ಟು;

ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಕೋಣಂದೂರು-1, ಹೊಸನಗರ-3, ಉಂಚ-1 ಒಟ್ಟು 5 ಕೇಂದ್ರಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿವೆ.

ಇಲಾಖೆ ಹೊರತಾದ ಕಟ್ಟಡಗಳು: ಒಟ್ಟು 124 ಕಟ್ಟಡಗಳು ಮಂಡಗದ್ದೆ-17, ಕೋಣಂದೂರು-17, ಆಗುಂಬೆ-11, ತೀರ್ಥಹಳ್ಳಿ-25, ಮತ್ತೂರು-14, ಹೊಸನಗರ-12, ಉಂಚ-17, ನಿಧಿಗೆ-11

ಇ) ಅಂಗನವಾಡಿ ಕೇಂದ್ರಗಳಿಗೆ ಸ್ವಂತ ಕಟ್ಟಡಗಳ ಕೊರತೆ ಹೋಬಳಿವಾರು ಎಷ್ಟು; ಈ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ತುರ್ತು ಕ್ರಮಗಳೇನು?

ಸ್ವಂತ ಕಟ್ಟಡ ಕೊರತೆಯಿರುವ ಕಟ್ಟಡಗಳ ವಿವರ ಕೆಳಕಂಡಂತಿದೆ:-

ಹೋಬಳಿ ಹೆಸರು	ಕೇಂದ್ರಗಳ ಸಂಖ್ಯೆ
ಮಂಡಗದ್ದೆ	17
ಕೋಣಂದೂರು	18
ಆಗುಂಬೆ	11
ಕಸಬಾ ತೀರ್ಥಹಳ್ಳಿ	25
ಮತ್ತೂರು	14
ಕೆರೆಹಳ್ಳಿ	0
ಹೊಸನಗರ	15
ಉಂಚ	18
ನಿಧಿಗೆ	11
ಒಟ್ಟು	**129**

129 ಕಟ್ಟಡಗಳ ಕೊರತೆಯಿದ್ದು 39 ಕಟ್ಟಡಗಳು ವಿವಿಧ ಯೋಜನೆಗಳಲ್ಲಿ ನಿರ್ಮಾಣ ಆಗುತ್ತಿದೆ. ಉಳಿದ ಕೇಂದ್ರಗಳಿಗೆ ಕಟ್ಟಡಗಳನ್ನು ಅನುದಾನ ಮತ್ತು ನಿವೇಶನ ಲಭ್ಯತೆಗನುಗುಣವಾಗಿ ಹಂತ ಹಂತವಾಗಿ ನಿರ್ಮಿಸಲಾಗುವುದು.

297 ಶ್ರೀ ಕುಮಾರಸ್ವಾಮಿ ಕೆ.ಜಿ.

ಅ. ರಾಜ್ಯದಲ್ಲಿನ ಕೆಸಿಸಿ ಬ್ಯಾಂಕುಗಳು ಸೇರಿದಂತೆ ಇತರೆ ಡಿಸಿಸಿ ಬ್ಯಾಂಕುಗಳ ಶಾಖೆಗಳನ್ನು ತೆರೆಯಲು ಯಾವ ನಿಯಮಗಳಡಿ ಅವಕಾಶ ನೀಡಲಾಗಿದೆ?

ಯಾವುದೇ ಡಿಸಿಸಿ ಬ್ಯಾಂಕು ತನ್ನ ಶಾಖೆಗಳನ್ನು ಬ್ಯಾಂಕಿನ ಕಾರ್ಯವ್ಯಾಪ್ತಿ ಪ್ರದೇಶದಲ್ಲಿ ತೆರೆಯಲು ಉದ್ದೇಶಿಸಿದಲ್ಲಿ ಆ ಸ್ಥಳದ ಸರ್ವೆ ರಿಪೋರ್ಟ್/ ಸಾಧ್ಯತಾ ವರದಿಯ ಆಧಾರದ ಮೇಲೆ ಆಡಳಿತ ಮಂಡಳಿಯ ಅನುಮೋದನೆಯೊಂದಿಗೆ

ಸಹಕಾರ ಸಂಘಗಳ ನಿಬಂಧಕರ ಪೂರ್ವಾನುಮತಿ ಪಡೆಯಲು ಆಯಾ ಬ್ಯಾಂಕಿನ ಬೈಲಾ ನಿಯಮಗಳಡಿ ಅವಕಾಶವಿರುತ್ತದೆ.

ಆ. ಈ ಬ್ಯಾಂಕುಗಳಲ್ಲಿ Roster ನಿಯಮಗಳನ್ನು ಅನುಸರಿಸಿ ನೇಮಕಾತಿ ಮಾಡಲಾಗುತ್ತಿದೆಯೇ?

ಹೌದು.

ಇ. ನೇಮಕಾತಿಯಲ್ಲಿ ಅಕ್ರಮವಾಗಿರುವ ಕುರಿತು ಸರ್ಕಾರಕ್ಕೆ ದೂರು ಬಂದಿರುವುದೆಷ್ಟು? ತೆಗೆದುಕೊಂಡ ಕ್ರಮಗಳೇನು?

ಬೀದರ್ ಮತ್ತು ಗುಲ್ಬರ್ಗಾ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ನೇಮಕಾತಿಯಲ್ಲಿ ಅಕ್ರಮವಾಗಿರುವ ಬಗ್ಗೆ ದೂರು ಬಂದಿರುತ್ತದೆ. ಈ ಎರಡು ಪ್ರಕರಣಗಳಿಗೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 64ರ ಪ್ರಕಾರ ವಿಚಾರಣೆಗಾಗಿ ಆದೇಶಿಸಲಾಗಿದೆ. ಗುಲ್ಬರ್ಗಾ ಡಿಸಿಸಿ ಬ್ಯಾಂಕಿನ ವಿಚಾರಣೆ ನಡೆಯುತ್ತಿದ್ದು ಪ್ರಗತಿ ಹಂತದಲ್ಲಿದೆ. ಬೀದರ್ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ವಿಚಾರಣಾ ವರದಿಯ ಮೇಲೆ ಪ್ರಕರಣ 68ರ ಆದೇಶದ ಮೇರೆಗೆ ಸಹಕಾರ ಸಂಘಗಳ ನಿಬಂಧಕರ ಕಛೇರಿ, ಬೆಂಗಳೂರಿನಲ್ಲಿ ನೇಮಕಾತಿ ಆದೇಶದ ಬಗ್ಗೆ ಮೇಲ್ಮನವಿ ಸಲ್ಲಿಸಿದ್ದು ಮೇಲ್ಮನವಿಯ ವಿಚಾರಣೆ ಜರುಗುತ್ತಿದೆ.

ಈ. 2006-07, 2007-08, 2008-09ನೇ ಸಾಲಿನಲ್ಲಿ ಡಿಸಿಸಿ ಜಿಲ್ಲಾ ಸಹಕಾರಿ ಬ್ಯಾಂಕುಗಳನ್ನು ಆಡಿಟ್ ಮಾಡಲಾಗುತ್ತಿದ್ದು ಎಷ್ಟು ಪ್ರಕರಣಗಳಲ್ಲಿ ಹಣ ವಸೂಲಾತಿ ಮಾಡಲು ನಿರ್ದೇಶನ ನೀಡಲಾಗಿದೆ ಹಾಗೂ 30.06.2009ರ ಅಂತ್ಯದವರೆಗೆ ವಸೂಲಾದ ಮೊಬಲಗು ಎಷ್ಟು? (ವಿವರ ಒದಗಿಸುವುದು)

2006-07, 2007-08, 2008-9ನೇ ಸಾಲಿನಲ್ಲಿ ಒಟ್ಟು 94 ಪ್ರಕರಣಗಳಲ್ಲಿ ಹಣ ವಸೂಲಾತಿ ಮಾಡಲು ನಿರ್ದೇಶನ ನೀಡಲಾಗಿದೆ. ದಿನಾಂಕ: 30.06.2009ರ ಅಂತ್ಯದವರೆಗೆ ರೂ.110.24 ಲಕ್ಷಗಳು ವಸೂಲಾಗಿರುತ್ತದೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಕುಮಾರಸ್ವಾಮಿ ಕೆ.ಜಿ.ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 297 ಕ್ಕೆ ಅನುಬಂಧ

ಕ್ರ ಸಂ	ಡಿಸಿಸಿ ಬ್ಯಾಂಕಿನ ಹೆಸರು	ವಸೂಲಾತಿಗೆ ನಿರ್ದೇಶನ ನೀಡಿದ ಪ್ರಕರಣಗಳು ಹಾಗೂ ಮೊತ್ತ					ದಿ: 30.06.2009 ರವರೆಗೆ ವಸೂಲಾದ ಮೊಬಲಗು
		2006-07		2007-08		2008-09	
		ಪ್ರಕರಣಗಳು	ಮೊತ್ತ	ಪ್ರಕರಣಗಳು	ಮೊತ್ತ	ಪ್ರಕರಣಗಳು ಮೊತ್ತ	

1.	ಬೆಂಗಳೂರು	19	56.60	–	–	ಲೆಕ್ಕಪರಿಶೋಧನೆಯ ಪ್ರಗತಿಯಲ್ಲಿರುತ್ತದೆ	29.48
2.	ಕೋಲಾರ	31	204.62	1	1.30	ಲೆಕ್ಕಪರಿಶೋಧನೆಯ ಪ್ರಗತಿಯಲ್ಲಿರುತ್ತದೆ	57.97
3.	ಚಿತ್ರದುರ್ಗ	1	2.12	–	–	ಲೆಕ್ಕಪರಿಶೋಧನೆಯ ಪ್ರಗತಿಯಲ್ಲಿರುತ್ತದೆ	3.00
4.	ದಾವಣಗೆರೆ	6	12.92	–	–	ಲೆಕ್ಕಪರಿಶೋಧನೆಯ ಪ್ರಗತಿಯಲ್ಲಿರುತ್ತದೆ	0.22
5.	ತುಮಕೂರು	11	85.89	–	–	ಲೆಕ್ಕಪರಿಶೋಧನೆಯ ಪ್ರಗತಿಯಲ್ಲಿರುತ್ತದೆ	4.57
6.	ಮೈಸೂರು	8	6.96	10	4.24	ಲೆಕ್ಕಪರಿಶೋಧನೆಯ ಪ್ರಗತಿಯಲ್ಲಿರುತ್ತದೆ	3.84
7.	ಹಾಸನ	–	–	1	9.71	ಲೆಕ್ಕಪರಿಶೋಧನೆಯ ಪ್ರಗತಿಯಲ್ಲಿರುತ್ತದೆ	0.39
8.	ಬಿಜಾಪುರ	1	6.78	1	1.19	ಲೆಕ್ಕಪರಿಶೋಧನೆಯ ಪ್ರಗತಿಯಲ್ಲಿರುತ್ತದೆ	7.97
9.	ಬಳ್ಳಾರಿ	–	–	4	2.80	ಲೆಕ್ಕಪರಿಶೋಧನೆಯ ಪ್ರಗತಿಯಲ್ಲಿರುತ್ತದೆ	2.80
10.	ಧಾರವಾಡ	–	–	1	4.33	ಲೆಕ್ಕಪರಿಶೋಧನೆಯ ಪ್ರಗತಿಯಲ್ಲಿರುತ್ತದೆ	–
	ಒಟ್ಟು	77	375.89	18	23.57		110.24

298 ಶ್ರೀ ಜಿ.ಕುಮಾರಸ್ವಾಮಿ.ಕೆ.ಜಿ, (ಶಿವಮೊಗ್ಗ ಗ್ರಾಮಾಂತರ)
ಮಾನ್ಯ ತೋಟಗಾರಿಕೆ ಹಾಗೂ ಬಂಧಿಖಾನೆ ಸಚಿವರು

ಅ) 2009–10ನೇ ಸಾಲಿನಲ್ಲಿ ಶಿವಮೊಗ್ಗ ನಗರದ ಹೃದಯ ಭಾಗದ ಬಂದಿಖಾನೆ ಸ್ಥಳಾಂತರಿಸಲು ಬಿಡುಗಡೆ ಮಾಡಲಾದ ಅನುದಾನವೆಷ್ಟು; ಆ ಪೈಕಿ ವೆಚ್ಚ ಮಾಡಲಾದ ಮೊಬಲಗು ಎಷ್ಟು?

2009–10ನೇ ಸಾಲಿನಲ್ಲಿ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.

ಆ) ಈ ರೀತಿ ಸ್ಥಳಾಂತರಿಸುವ ಬಂದೀಖಾನೆಗೆ ನಗರದ ಹೊರವಲಯದಲ್ಲಿ ಗುರುತಿಸಲಾದ ರಸ್ತೆ ಸೌಲಭ್ಯ ಹೊಂದಿದ ಕಂದಾಯ ಇಲಾಖೆಗೆ ಸೇರಿದ ಜಮೀನನ್ನು ಗುರುತಿಸಲಾಗಿದೆಯೇ (ಸರ್ವೆವಾರು ವಿವರ ನೀಡುವುದು)

ಜಮೀನು ಗುರುತಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ.